ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.03.2024.

**ಪಾಟೀ ಸವಾಲುಃ ಎದುರುದಾರ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ**

1 ಮತ್ತು 2 ನೇ ಎದುರುದಾರರು ನನ್ನ ಮಕ್ಕಳು, 3 ನೇ ಎದುರುದಾರಳು ನನ್ನ 2 ನೇ ಹೆಂಡತಿ ಇರುತ್ತಾಳೆ. 1 ರಿಂದ 3 ನೇ ಎದುರುದಾರರು 3 ನೇ ಎದುರುದಾರಳ ತವರು ಮನೆಯಾದ ಹುಣಸಿ ಅಡಗಿ ಗ್ರಾಮದಲ್ಲಿ ಇರುತ್ತಾರೆ. 1 ರಿಂದ 3 ನೇ ಎದುರುದಾರರಿಗೆ ಇವತ್ತಿನವರೆಗೂ ನಾನು ಯಾವುದೇ ಖರ್ಚಿನ ವ್ಯವಸ್ಥೆ ಮಾಡಿರುವುದಿಲ್ಲ, ಏಕೆಂದರೆ ಅವರು ಬಂದಿರುವುದಿಲ್ಲ ನಾನು ಕೊಟ್ಟಿಲ್ಲ. ನನಗೆ ಒಟ್ಟು 2 ವರೆ ಎಕರೆ ಜಮೀನು ಇರುತ್ತದೆ. ನಾನು ಇದುವರೆಗೂ ನನ್ನ ಯಾವುದೇ ಜಮೀನನ್ನು ಮಾರಾಟ ಮಾಡಿರುವುದಿಲ್ಲ. ನನಗೆ ಸುಮಾರು 21 ವರೆ ಎಕರೆ ಜಮೀನು ಮೊದಲಿಗೆ ಇತ್ತು, ಅದನ್ನೆಲ್ಲ ನಾನು ಮಾರಾಟ ಮಾಡಿಕೊಂಡು ಬರಿ 2 ವರೆ ಎಕರೆ ಉಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಒಟ್ಟು 8 ಎಕರೆ ಜಮೀನು ಇತ್ತು, ನನ್ನ ಪಾಲಿಗೆ 2 ವರೆ ಎಕರೆ ಬಂದಿರುತ್ತದೆ, ಉಳಿದ ಜಮೀನು ನನ್ನ ತಮ್ಮನಿಗೆ ಹೋಗಿರುತ್ತೇನೆ, ನನ್ನ ತಾಯಿಗೆ ಯಾವುದೆ

ಭೂಮಿ ಕೊಟ್ಟಿಲ್ಲ. ನನಗೆ ಬಂದ 2 ವರೆ ಎಕರೆ ಜಮೀನಿನಲ್ಲಿ ನಾನೇ ಮಾಲಿಕ ಇರುತ್ತೇನೆ ಎಂದರೆ, ಸಾಕ್ಷಿ ನನ್ನ ತಾಯಿ ಕೂಡಾ ಇರುತ್ತಾಳೆ ಎಂದು ನುಡಿಯುತ್ತಾರೆ. ಸುಮಾರು 10 ವರ್ಷದ ಹಿಂದೆ ನನ್ನ ತಮ್ಮನಿಗೆ ಜಮೀನು ಕೊಟ್ಟಿರುತ್ತೇವೆ. ನನ್ನ ತಮ್ಮನಿಗೆ ವಾಟ್ನಿ ಪ್ರಕಾರ ಉಳಿದ ಜಮೀನು ಕೊಟ್ಟಿರುತ್ತೇವೆ. ನಮಗೆ ಒಂದೇ ಮನೆ ಇರುತ್ತದೆ, ಅದರಲ್ಲಿ ಭಾಗವಾಗಿರುತ್ತದೆ. ನಾನು ಡ್ರೈವರ್ ಕೆಲಸ ಮಾಡುತ್ತೇನೆ.

ದಿಃ 01.10.2018 ರಂದು ನ್ಯಾಯಾಲಯದ ಸಮನ್ಸ್ ತೆಗೆದುಕೊಂಡು ನ್ಯಾಯಾಲಯದ ಸಿಬ್ಬಂದಿ ಒಎಸ್.ನಂ.69/2018 ರಲ್ಲಿ ಬಂದಿದ್ದ ಎಂದರೆ ಸರಿಯಲ್ಲ. ಆಗ ನನ್ನ ತಾಯಿ ನಾನು ಕಲಬುರಗಿಗೆ ಹೋಗಿರುತ್ತೇನೆ ಎಂದು ಸದರಿ ಸಿಬ್ಬಂದಿಗೆ ಹೇಳಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿಃ 03.11.2018 ರಂದು ನ್ಯಾಯಾಲಯದ ಸಮನ್ಸ್ ತೆಗೆದುಕೊಂಡು ನ್ಯಾಯಾಲಯದ ಸಿಬ್ಬಂದಿ ಪುನಃ ಬಂದಿರುತ್ತಾರೆ ಎಂದರೆ, ಸಾಕ್ಷಿ ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ನ್ಯಾಯಾಲಯದ ಸಿಬ್ಬಂದಿ ಬಂದಿದ್ದು, ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**